# ಸ್ವಭಾವದೋಷ (ಷಡ್ರಿಪು) ನಿರ್ಮೂಲನೆಯ ಮಹತ್ವ ಮತ್ತು ಗುಣವೃದ್ಧಿ ಪ್ರಕ್ರಿಯೆ

## ಪ್ರಸ್ತುತ ಖಂಡದ ಮನೋಗತ

ಯಾರಾದರೊಬ್ಬ ವ್ಯಕ್ತಿಯ ಸುಖ-ಸಮಾಧಾನದ ವಿಚಾರ ಮಾಡುವಾಗ ಮುಖ್ಯವಾಗಿ 'ಸ್ವಭಾವ'ವನ್ನು ಪರಿಗಣಿಸುವುದು ಆವಶ್ಯಕವಾಗಿದೆ. ವ್ಯಕ್ತಿಯ ವರ್ತನೆಯಿಂದ ಅವನ ಸ್ವಭಾವವನ್ನು ಪರೀಕ್ಷಿಸಬಹುದು. ವ್ಯಕ್ತಿಯು ವರ್ತನೆಯು ಅವನ ವೃತ್ತಿಯನ್ನು ಅವಲಂಬಿಸಿರುತ್ತದೆ. ವ್ಯಕ್ತಿತ್ವದಲ್ಲಿನ ಗುಣದೋಷಗಳು ವ್ಯಕ್ತಿಯ ವೃತ್ತಿಯ ಮೇಲೆ ಪ್ರಭಾವ ಬೀರುತ್ತವೆ. ಸ್ವಭಾವದೋಷಗಳು ವ್ಯಕ್ತಿಯ ಸುಖ-ಸಮಾಧಾನಕ್ಕೆ ಅಡಚಣೆಯಾಗಿರುತ್ತವೆ ಮತ್ತು ಗುಣಗಳು ಸುಖ-ಸಮಾಧಾನಕ್ಕೆ ಪೂರಕವಾಗಿರುತ್ತವೆ. ಸ್ವಭಾವದೋಷಗಳಿಂದ ವ್ಯಕ್ತಿಯ ವೈಯಕ್ತಿಕ ಜೀವನದಲ್ಲಿ ಒತ್ತಡ ನಿರ್ಮಾಣವಾಗುತ್ತದೆ. ವ್ಯಕ್ತಿಯಲ್ಲಿನ ಸ್ವಭಾವದೋಷ ಗಳು ಸಾಮಾಜಿಕ ಮತ್ತು ರಾಷ್ಟ್ರೀಯ ಸ್ವಾಸ್ಥ್ಯಕ್ಕೂ ಅಡಚಣೆಯಾಗಿರುತ್ತವೆ. ಆದುದರಿಂದ ವ್ಯಕ್ತಿಯ ಜೀವನದ ಮೇಲೂ ದುಷ್ಪರಿಣಾಮವಾಗುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಸುಖಿ ಮತ್ತು ಸಮಾಧಾನಕಾರಿಯಾದ ಜೀವನವನ್ನು ಜೀವಿಸಲು ಸ್ವಭಾವದೋಷಗಳ ನಿರ್ಮೂಲನೆ ಮತ್ತು ಗುಣವೃದ್ಧಿ ಮಾಡುವುದು ಅನಿವಾರ್ಯವಾಗಿದೆ.

ಯಾವುದಾದರೊಂದು ಕೃತಿಯನ್ನು ಮಾಡುವ ಮೊದಲು ಆ ಕೃತಿಯನ್ನು ಮಾಡುವುದರ ಹಿಂದಿನ ಶಾಸ್ತ್ರವನ್ನು ನಾವು ಬುದ್ಧಿಯಿಂದ ತಿಳಿದುಕೊಂಡರೆ ಅದರ ಮಹತ್ವವು ಮನಸ್ಸಿಗೆ ತೀವ್ರತೆಯಿಂದ ಅರಿವಾಗುತ್ತದೆ. ಆದುದರಿಂದ ಶಾಸ್ತ್ರವನ್ನು ತಿಳಿದುಕೊಂಡು ಮಾಡಿದ ಕೃತಿಯು ಹೆಚ್ಚು ಮನಃಪೂರ್ವಕವಾಗಿ ಆಗುವುದರಿಂದ ಅದು ತುಂಬಾ ಪರಿಣಾಮಕಾರಿಯಾಗುತ್ತದೆ. ಸ್ವಭಾವದೋಷಗಳಿಂದ ಆಗುವ ಅಪರಿಮಿತ ಹಾನಿ, ಹಾಗೆಯೇ ಅವುಗಳ ನಿರ್ಮೂಲನೆ ಮತ್ತು ಗುಣವೃದ್ಧಿಯಿಂದ ವಿವಿಧ ಸ್ತರದಲ್ಲಿ ಆಗುವ ಲಾಭವನ್ನು ತಿಳಿದುಕೊಂಡರೆ ಸ್ವಭಾವದೋಷ ನಿರ್ಮೂಲನೆ ಮತ್ತು ಗುಣವೃದ್ಧಿ ಇವುಗಳ ಮಹತ್ವವನ್ನು ಮನಸ್ಸಿನ ಮೇಲೆ ತೀವ್ರತೆಯಿಂದ ಬಿಂಬಿಸಲು ಸಾಧ್ಯವಾಗುತ್ತದೆ. ಹಾಗೆಯೇ ಈ ಪ್ರಕ್ರಿಯೆಯನ್ನು, ನಿಯಮಿತವಾಗಿ, ಸತತವಾಗಿ ಮತ್ತು ಪರಿಣಾಮಕಾರಿಯಾಗಿ ಕೃತಿಯಲ್ಲಿ ತರಲು ಸಹಾಯವಾಗುತ್ತದೆ.

ಪ್ರಸ್ತುತ ಗ್ರಂಥದಲ್ಲಿನ 'ಅಧ್ಯಾಯ ೧ - ಸ್ವಭಾವದೋಷ ನಿರ್ಮೂಲನೆಯ ಮಹತ್ವ'ದಲ್ಲಿ ಮನಸ್ಸಿನ ಕಾರ್ಯ; ಸಂಸ್ಕಾರಗಳ ನಿರ್ಮಿತಿ; ಸ್ವಭಾವದೋಷ ನಿರ್ಮೂಲನೆಯ ಬಗೆಗಿನ ತಪ್ಪು ತಿಳುವಳಿಕೆಗಳು ಹಾಗೂ ಅವುಗಳ ಹಿಂದಿನ ಕಾರಣ; ಸ್ವಭಾವದೋಷಗಳಿಂದ ವ್ಯಕ್ತಿಯ ಜೀವನದಲ್ಲಿ ಆಗುವ ಹಾನಿ ಮುಂತಾದ ವಿಷಯಗಳ ಸವಿಸ್ತಾರ ಮಾಹಿತಿಯನ್ನು ಕೊಡಲಾಗಿದೆ. ಸ್ವಭಾವದೋಷಗಳಿಂದ ವಿವಿಧ ಯೋಗಮಾರ್ಗಗಳಲ್ಲಿ ಆಗುವ ಹಾನಿ, ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯಲ್ಲಿ ಆಗುವ ಅಪರಿಮಿತ ಹಾನಿ ಎಂಬ ವಿಷಯದಲ್ಲಿ ಸವಿಸ್ತಾರ ಮಾಹಿತಿಯನ್ನೂ ಕೊಡಲಾಗಿದೆ. ಹಾಗೆಯೇ ಸ್ವಭಾವದೋಷಗಳ ನಿರ್ಮೂಲನೆಯಿಂದ ವ್ಯಕ್ತಿಯ ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಉನ್ನತಿಯಲ್ಲಿ ಅಡಚಣೆಗಳನ್ನು ನಿರ್ಮಿಸುವ ಕೆಟ್ಟ ಶಕ್ತಿಗಳ ತೊಂದರೆಗಳ ನಿವಾರಣೆಯಾಗುವುದರ ಹಿಂದಿನ ಶಾಸ್ತ್ರ, ಸ್ವಭಾವದೋಷಗಳಿಂದ ಉಂಟಾದ ಸಾಮಾಜಿಕ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಹಿಂದಿನ ಕಾರಣಗಳು ಮತ್ತು ಈ ಸಮಸ್ಯೆಗಳ ನಿವಾರಣೆಗಾಗಿ

ಮಾಡುವ ಎಲ್ಲ ಉಪಾಯಗಳು ಮುಂತಾದ ವಿಷಯಗಳ ವಿಚಾರವನ್ನೂ ಮಾಡಲಾಗಿದೆ. ಗ್ರಂಥದ ಪುಟಸಂಖ್ಯೆಗಳು ಹೆಚ್ಚುವುದರಿಂದ ಈ ಪ್ರಕ್ರಿಯೆಯಲ್ಲಿನ ಸವಿಸ್ತಾರ ಮಾಹಿತಿಯನ್ನು ಈ ಗ್ರಂಥದಲ್ಲಿ ಕೊಡದೇ ಈ ಗ್ರಂಥಮಾಲಿಕೆಯಲ್ಲಿನ ಎರಡನೆಯ ಖಂಡದಲ್ಲಿ ಕೊಡಲಾಗಿದೆ.

ಜೀವನದಲ್ಲಿನ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗಲು ಆವಶ್ಯಕವಾಗಿರುವ 'ಪ್ರಭಾವೀ ಮತ್ತು ಆದರ್ಶ' ವ್ಯಕ್ತಿತ್ವವನ್ನು ವಿಕಸನಗೊಳಿಸಲು ಸ್ವಭಾವದೋಷ ನಿರ್ಮೂಲನೆಯೊಂದಿಗೆ ಗುಣಸಂವರ್ಧನೆಗಾಗಿ ಪ್ರಯತ್ನಿಸುವುದೂ ಆವಶ್ಯಕವಾಗಿದೆ. ಗುಣವೃದ್ಧಿ ಪ್ರಕ್ರಿಯೆಯ ಮಹತ್ವ, ಅದರಿಂದಾಗುವ ಲಾಭಗಳು, ಈ ಪ್ರಕ್ರಿಯೆಯಲ್ಲಿನ ವಿವಿಧ ಹಂತಗಳಲ್ಲಿ ಮಾಡಬೇಕಾದ ಪ್ರಯತ್ನ ಮುಂತಾದ ವಿಷಯಗಳ ಸವಿಸ್ತಾರ ಮಾಹಿತಿಯನ್ನೂ ಈ ಗ್ರಂಥದ 'ಅಧ್ಯಾಯ ೨ - 'ಗುಣವೃದ್ಧಿ ಪ್ರಕ್ರಿಯೆ'ಯಲ್ಲಿ ಕೊಡಲಾಗಿದೆ.

ಈ ಗ್ರಂಥವನ್ನು ಅಧ್ಯಯನ ಮಾಡಿ ವಾಚಕರು ಸ್ವಭಾವದೋಷ ನಿರ್ಮೂಲನ ಮತ್ತು ಗುಣಸಂವರ್ಧನೆಗಾಗಿ ಪ್ರಯತ್ನಿಸಿ ಜೀವನವನ್ನು ಸುಖಮಯಗೊಳಿಸಿಕೊಳ್ಳಬೇಕು, ಹಾಗೆಯೇ ಧರ್ಮಾಚರಣೆ ಮಾಡಿ ರಾಷ್ಟ್ರದ ಎಲ್ಲ ರೀತಿಯ ಉತ್ಕರ್ಷಕ್ಕಾಗಿ ಕೃತಿಶೀಲರಾಗಬೇಕೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. - ಸಂಕಲನಕಾರರು


**ಕರ್ಮಬಂಧನದಿಂದ ಮುಕ್ತರಾಗಲು**

**ನಾಮದ ಮಹತ್ವ ತಿಳಿಸುವ ಸನಾತನದ ಗ್ರಂಥ !**

# ನಾಮಜಪದ ಮಹತ್ವ ಮತ್ತು ಲಾಭಗಳು

- ಭಗವಂತನ ರೂಪಕ್ಕಿಂತ ಅವನ ನಾಮವು ಏಕೆ ಮಹತ್ವದ್ದಾಗಿದೆ?
- ನಾಮವು ಸದಾಚಾರಿ ಮತ್ತು ದುರಾಚಾರಿ ಎಲ್ಲರಿಗೂ ಏಕೆ ತಾರಕವಾಗಿದೆ?
- ನಾಮಜಪದಿಂದ ಮೃತ್ಯುವಿನ ನಂತರವೂ ಹೇಗೆ ಲಾಭವಾಗುವುದು?
- ನಾಮಜಪ ಮಾಡುವುದರಿಂದ ಸಮಷ್ಟಿಗೆ ಆಗುವ ಲಾಭಗಳಾವುವು?
- ಇತರ ಯೋಗಮಾರ್ಗಗಳಿಗಿಂತ ನಾಮಜಪವು ಹೇಗೆ ಶ್ರೇಷ್ಠವಾಗಿದೆ?
- ಸಂಚಿತ ನಿರ್ಮಾಣವಾಗದಿರುವುದು, ಪ್ರಾರಬ್ಧದ ಮೇಲೆ ಜಯಗಳಿಸುವುದು ಮತ್ತು ಅಕರ್ಮಕರ್ಮವಾಗುವುದು ಇವುಗಳಿಗೆ ನಾಮಜಪವು ಹೇಗೆ ಸಹಾಯಕವಾಗುವುದು?

**ನಾಮಜಪದಿಂದ ನಾಮಿಯೊಂದಿಗೆ (ಈಶ್ವರನೊಂದಿಗೆ) ಏಕರೂಪವಾಗುವುದೆಂದರೆ 'ನಾಮಸಂಕೀರ್ತನಯೋಗ' !**

# ಸ್ವಭಾವದೋಷ (ಷಡ್ರಿಪು) ನಿರ್ಮೂಲನೆಯ ಮಹತ್ವ ಮತ್ತು ಗುಣವೃದ್ಧಿ ಪ್ರಕ್ರಿಯೆ

## ಅಧ್ಯಾಯ ೧ : ಸ್ವಭಾವದೋಷ (ಷಡ್ರಿಪು) ನಿರ್ಮೂಲನೆಯ ಮಹತ್ವ

### ಅನುಕ್ರಮಣಿಕೆ


| | |
|---|---|
| **೧. ಮನಸ್ಸು** | **೨೧** |
| ೧ ಅ. ಅಧ್ಯಾತ್ಮಶಾಸ್ತ್ರಕ್ಕನುಸಾರ | ೨೧ |
| ೧ ಆ. ಆಧುನಿಕ ಮನಃಶಾಸ್ತ್ರಕ್ಕನುಸಾರ | ೨೨ |
| ೧ ಆ ೧. ಬಾಹ್ಯಮನಸ್ಸು (Conscious mind) | ೨೨ |
| ೧ ಆ ೨. ಅಂತರ್ಮನಸ್ಸು (Unconscious mind) | ೨೨ |
| **೨. ಸಂಸ್ಕಾರಗಳು** | **೨೩** |
| **೩. ಸ್ವಭಾವ** | **೨೫** |
| ೩ ಅ. ಸ್ವಭಾವದಲ್ಲಿನ ಗುಣ-ದೋಷಗಳು | ೨೬ |
| **೪. ಸ್ವಭಾವದೋಷ (ಷಡ್ರಿಪು) ನಿರ್ಮೂಲನ ಪ್ರಕ್ರಿಯೆ** | **೨೭** |
| **೫. ಸ್ವಭಾವದೋಷ ನಿರ್ಮೂಲನೆಯ ಬಗೆಗಿನ ತಪ್ಪು ತಿಳುವಳಿಕೆಗಳು** | **೨೮** |
| **೬. ಸ್ವಭಾವದೋಷ ನಿರ್ಮೂಲನೆಯ ಬಗೆಗಿನ ತಪ್ಪು ತಿಳುವಳಿಕೆಗಳ ಹಿಂದಿನ ಕಾರಣಗಳು** | **೨೮** |
| **೭. ವ್ಯಷ್ಟಿ ಜೀವನ ಸುಖಿಯಾಗಲು ಸ್ವಭಾವದೋಷ ನಿರ್ಮೂಲನೆಯ ಮಹತ್ವ** | **೩೦** |
| ೭ ಅ. ಸ್ವಭಾವದೋಷಗಳಿಂದಾಗುವ ಹಾನಿ | ೩೧ |
| ೭ ಅ ೧. ವ್ಯಾವಹಾರಿಕ ದೃಷ್ಟಿಯಿಂದ | ೩೧ |
| ೭ ಅ ೨. ಆಧ್ಯಾತ್ಮಿಕ ದೃಷ್ಟಿಯಿಂದ | ೩೪ |
| ೭ ಅ ೨ ಅ. ವಿವಿಧ ಯೋಗಮಾರ್ಗಗಳಲ್ಲಿ ಅಡಚಣೆಗಳನ್ನು ನಿರ್ಮಿಸುವ ಸ್ವಭಾವದೋಷಗಳು | ೩೫ |
| ೭ ಅ ೨ ಆ. ವ್ಯಷ್ಟಿ ಸಾಧನೆಯಲ್ಲಾಗುವ ಹಾನಿಗಳು | ೩೬ |
| ೭ ಅ ೨ ಇ. ಸಮಷ್ಟಿ ಸಾಧನೆಯಲ್ಲಾಗುವ ಹಾನಿ | ೪೭ |
| **೮. ಸ್ವಭಾವದೋಷ ಮತ್ತು ಸಂತರು** | **೪೯** |
| ೮ ಅ. ಸ್ವಭಾವದೋಷ ನಿರ್ಮೂಲನೆಯ ಬಗ್ಗೆ ಸಂತರು ಹೇಳಿದ ಮಹತ್ವ | ೪೯ |
| ೮ ಆ. ಸ್ವಭಾವದೋಷ ನಿರ್ಮೂಲನೆಗಾಗಿ ಸಂತರು ಮಾಡಿದ ಪ್ರಯತ್ನ | ೪೯ |

೯. **ಸ್ವಭಾವದೋಷ ನಿರ್ಮೂಲನೆಯಿಂದಾಗುವ ಲಾಭಗಳು** **೫೦**
೯ ಅ. ವ್ಯಾವಹಾರಿಕ ದೃಷ್ಟಿಯಲ್ಲಿ ೫೦
೯ ಆ. ಆಧ್ಯಾತ್ಮಿಕ ದೃಷ್ಟಿಯಲ್ಲಿ ೫೮
೧೦. **ಸಮಷ್ಟಿ ಜೀವನ ಸುಖಿಯಾಗಲು ಸ್ವಭಾವದೋಷ ನಿರ್ಮೂಲನೆಯ ಮಹತ್ವ** **೬೫**
೧೦ ಅ. ವ್ಯಷ್ಟಿ ಜೀವನದಲ್ಲಿನ ಸುಖಕ್ಕೆ ಸಮಷ್ಟಿ ಜೀವನದಲ್ಲಿನ ಸುಖದೊಂದಿಗಿರುವ ಸಂಬಂಧ ೬೫
೧೦ ಆ. ಸಮಾಜ ಮತ್ತು ರಾಷ್ಟ್ರ ಇವುಗಳ ಸಂದರ್ಭದಲ್ಲಿ ಸ್ವಭಾವದೋಷ ನಿರ್ಮೂಲನ ೬೬
೧೦ ಇ. ಸ್ವಭಾವದೋಷ ನಿರ್ಮೂಲನೆಯ ದೃಷ್ಟಿಕೋನದಿಂದ ಧರ್ಮಪಾಲನೆಯ ಮಹತ್ವ ೬೯
೧೦ ಇ ೧. ಧರ್ಮಪಾಲನೆಗಾಗಿ ಸ್ವಭಾವದೋಷಗಳ ನಿರ್ಮೂಲನೆಯ ಮಹತ್ವ ೭೧
೧೧. **ಸಮಷ್ಟಿ ಜೀವನವು ಸುಖಿ ಮತ್ತು ಸಮೃದ್ಧವಾಗಲು ಸಾರ್ವತ್ರಿಕ ಉಪಾಯಗಳು** **೭೧**
೧೧ ಅ. ತಮ್ಮಲ್ಲಿ ಮತ್ತು ಸಮಾಜದಲ್ಲಿ ಸಾಧಕತ್ವವನ್ನು ನಿರ್ಮಿಸುವುದು
೧೧ ಅ ೧. ಸಮಾಜದಲ್ಲಿ ಸಾಧಕತ್ವವನ್ನು ನಿರ್ಮಿಸಲು ಸ್ವಭಾವದೋಷ ನಿರ್ಮೂಲನೆ ಮತ್ತು ಗುಣವೃದ್ಧಿ ಇವುಗಳ ಮಹತ್ವ ೭೨
೧೧ ಆ. ಕ್ಷಾತ್ರವೃತ್ತಿಯನ್ನು ಅಳವಡಿಸಿಕೊಳ್ಳುವುದು ೭೩
೧೧ ಆ ೧. ಕ್ಷಾತ್ರವೃತ್ತಿಯನ್ನು ಅಳವಡಿಸಿಕೊಳ್ಳಲು ಸ್ವಭಾವದೋಷ ನಿರ್ಮೂಲನ ಮತ್ತು ಗುಣವೃದ್ಧಿ ಇವುಗಳ ಮಹತ್ವ ೭೩
೧೨. **ಮೃತ್ಯುನಂತರದ ಲಾಭಗಳು** **೭೭**
೧೨ ಅ. ಉಚ್ಚಲೋಕದಲ್ಲಿ ಸ್ಥಾನ ಸಿಗುವುದು ೭೭
೧೨ ಅ ೧. ಉಚ್ಚಲೋಕಗಳಲ್ಲಿ ಸ್ಥಾನ ಸಿಗಲು ಆವಶ್ಯಕವಾಗಿರುವ ಸಮಷ್ಟಿ ಗುಣಗಳಲ್ಲಿ ಸ್ವಭಾವದೋಷ ನಿರ್ಮೂಲನೆಗೆ ಎಲ್ಲಕ್ಕಿಂತ ಹೆಚ್ಚು ಮಹತ್ವ ೭೮
೧೨ ಆ. ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯು ಒಳ್ಳೆಯ ರೀತಿಯಿಂದ ನಡೆದು ಸಾಯುಜ್ಯ ಮುಕ್ತಿ ಸಿಗುವುದು ೭೮
೧೩. **ಸ್ವಭಾವದೋಷಗಳ ಬಗ್ಗೆ ಕೆಲವು ಜಿಜ್ಞಾಸುಗಳು ವಿಚಾರಿಸಿದ ಸಂದೇಹಗಳ ನಿವಾರಣೆ** **೭೮**

# ಅಧ್ಯಾಯ ೨ : ಗುಣವೃದ್ಧಿ ಪ್ರಕ್ರಿಯೆ

## ಅನುಕ್ರಮಣಿಕೆ


೧. ವ್ಯಾಖ್ಯೆ ೮೨

೨. ಧ್ಯೇಯ ೮೨

೩. ಪ್ರಕ್ರಿಯೆಯ ಮಹತ್ವ ಮತ್ತು ಪ್ರಕ್ರಿಯೆಯಿಂದಾಗುವ ಲಾಭಗಳು ೮೩

೪. ಪ್ರಕ್ರಿಯೆಯಲ್ಲಿನ ಉದ್ದೇಶಗಳು ೮೪

೪ ಅ. ಸಾಮಾನ್ಯ ವ್ಯಕ್ತಿ ೮೫

೪ ಆ. ಮಧ್ಯಮ ಪ್ರಮಾಣದಲ್ಲಿ ಗುಣಗಳ ವಿಕಾಸವಾಗಿರುವ ವ್ಯಕ್ತಿ ೮೫

೪ ಇ. ಗುಣಗಳು ಒಳ್ಳೆಯ ರೀತಿಯಲ್ಲಿ ವಿಕಾಸವಾಗಿರುವ ‘ಗುಣಿ ವ್ಯಕ್ತಿ’ ಅಥವಾ ‘ಉತ್ತಮ ಕಾರ್ಯಕರ್ತ’ ೮೫

೪ ಈ. ಸಾಧಕ ೮೬

೪ ಉ. ಆಧ್ಯಾತ್ಮಿಕ ದೃಷ್ಟಿಯಿಂದ ಉನ್ನತ ವ್ಯಕ್ತಿ ಅಥವಾ ಸಂತ ೮೮

೫. ಪ್ರಕ್ರಿಯೆಯಲ್ಲಿನ ಹಂತಗಳು ೮೯

ಹಂತ ೧. ಪ್ರಕ್ರಿಯೆಗಾಗಿ ಗುಣಗಳನ್ನು ಆರಿಸುವುದು ೮೯

ಹಂತ ೨. ಪ್ರಕ್ರಿಯೆಗಾಗಿ ಆರಿಸಿದ ಗುಣಕ್ಕನುಸಾರ ದೈನಂದಿನ ಜೀವನದಲ್ಲಿನ ವಿವಿಧ ಅವಕಾಶಗಳನ್ನು ಹುಡುಕುವುದು ಮತ್ತು ಪ್ರಯತ್ನಗಳ ಸ್ತರವನ್ನು ನಿರ್ಧರಿಸುವುದು ೯೧

ಹಂತ ೩. ಇಡೀ ದಿನದಲ್ಲಿ ಪ್ರಕ್ರಿಯೆಗಾಗಿ ಆರಿಸಿದ ಗುಣಗಳಿಗೆ ಅಡಚಣೆಯಾಗುವ ತಪ್ಪುಗಳನ್ನು ಹುಡುಕಿ ಸರಿಪಡಿಸುವುದು ೯೩

೧. ಕೃತಿಯ ಸ್ತರದಲ್ಲಿನ ತಪ್ಪುಗಳನ್ನು ಸುಧಾರಿಸುವುದು ೯೩

೨. ವೈಚಾರಿಕ ಸ್ತರದಲ್ಲಿನ ತಪ್ಪುಗಳನ್ನು ಸುಧಾರಿಸುವುದು ೯೬

ಹಂತ ೪. ಚಿತ್ತದಲ್ಲಿ ಗುಣದ ಸಂಸ್ಕಾರವನ್ನು ನಿರ್ಮಿಸಲು ಸ್ವಯಂಸೂಚನೆಗಳನ್ನು ಕೊಡಬೇಕು ೯೭

ಹಂತ ೫. ಪ್ರಕ್ರಿಯೆಯ ವರದಿಯನ್ನು ತೆಗೆದುಕೊಳ್ಳುವುದು ೯೮

೬. ಪ್ರಕ್ರಿಯೆಯನ್ನು ನಡೆಸುವಾಗ ಗಮನದಲ್ಲಿಡಬೇಕಾದ ಘಟಕಗಳು ೯೯

೭. ಪ್ರಕ್ರಿಯೆಯು ಕಡಿಮೆ ಸಮಯದಲ್ಲಿ ಯಶಸ್ವಿಯಾಗಲು ಬೇಕಾಗುವ ಆವಶ್ಯಕ ಗುಣಗಳು ೧೦೦

೮. ವಿವಿಧ ಗುಣಗಳು ಮತ್ತು ಅವುಗಳನ್ನು ವೃದ್ಧಿಸಲು ಪ್ರಯತ್ನಿಸಿದಾಗ ಸಾಧಕರಿಗೆ ಬಂದ ಅನುಭೂತಿಗಳು ೧೦೧